ತೊಂದರೆ ಆಗುವುದಿಲ್ಲ. ನವೆಂಬರ್ ಒಂದನೇ ತಾರೀಖಿನ ಒಳಗಡೆ ಖಾಯಂ ಅಭ್ಯರ್ಥಿಗಳನ್ನು ನೇಮಕ ಮಾಡುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಶಿಕ್ಷಕರಿಲ್ಲದೆ ಖಾಲಿ ಬಿಲ್ಡಿಂಗ್‌ಗಳು ಎಷ್ಟು ಇದೆ ?

ಶ್ರೀ ಎಂ. ರಘುಪತಿ.—ವಿದ್ಯಾರ್ಥಿಗಳಿಲ್ಲದಿದ್ದರೆ, ಬಿಲ್ಡಿಂಗ್ ಖಾಲಿ ಇರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನೇಮಕಾತಿ ಸಮಿತಿಗಳನ್ನು ಮಾಡಿ ನವೆಂಬರ್ ಒಂದನೇ ತಾರೀಖಿನ ಒಳಗಡೆ ಭರ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಪ್ರೌಢಶಾಲೆಗಳ ವಿಷಯದಲ್ಲಿ ನಮಗೆ ಗೊತ್ತಿರುವ ಹಾಗೆ, ಜಾಯಿಂಟ್ ಡೈರೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ಹಿಂದೆ ಒಂದು ಸಮಿತಿಯನ್ನು ಮಾಡಿದಂತಹ ಒಂದು ಪರಿಸ್ಥಿತಿ ಇತ್ತು. ಅದು ಯಾವ ರೀತಿಯಲ್ಲಿತ್ತೋ ಹಾಗೆಯೇ ಇದನ್ನೂ ಮಾಡುತ್ತೀರಾ ? ಇದರ ಬಗ್ಗೆ ಹಿಂದೆ ಅನೇಕ ಆಪಾದನೆಗಳು ಮತ್ತು ಅಲ್ಲಿ ದುರ್ವ್ಯವಹಾರ ನಡೆಯುತ್ತಿತ್ತು. ಈಗಲೂ ನಡೆಯಬಹುದು. ಅದನ್ನು ತಪ್ಪಿಸುವುದಕ್ಕೆ ಯಾವ ರೀತಿ ಮಾಡುತ್ತೀರಿ.

ಶ್ರೀ ಎಂ. ರಘುಪತಿ.—ಇದರ ಬಗ್ಗೆ ಎರಡು ಅಭಿಪ್ರಾಯಗಳಿವೆ. ಸರ್ಕಾರೀ ಅಧಿಕಾರಿಗಳನ್ನು ನೇಮಕ ಮಾಡಿ, ಅವರ ಮೂಲಕ ನೇಮಕ ಮಾಡುವುದು. ಮತ್ತೊಂದು ಪಾಸಗಿಯವರನ್ನು ನೇಮಕ ಮಾಡಿ. ಅವರ ಮೂಲಕ ನೇಮಕ ಮಾಡಬೇಕೆಂದಿದೆ. ಡಿ.ಎಲ್.ಆರ್.ಸಿ. ಅನುಭವವನ್ನು ಗಮನದಲ್ಲಿಟ್ಟುಕೊಂಡು, ಇದರ ಬಗ್ಗೆ ಒಂದು ವಾರದೊಳಗಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ನಿನ್ನೆ ಹೇಳಿದ್ದೇನೆ.

ಹೊಸದುರ್ಗ ತಾಲ್ಲೂಕಿನ ಕಪ್ಪಗೆರೆ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವ

೨೨೫ (ಖಿಲ್ಲೆ) ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಹೊಸದುರ್ಗ ತಾಲ್ಲೂಕು ಕಸಬಾ ಹೋಬಳಿಯಲ್ಲಿನ ಕಪ್ಪಗೆರೆ ಗ್ರಾಮದಲ್ಲಿ ತೀವ್ರ ಜಲಕ್ಷಾಮ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸರಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮವೇನು ?

ಇ) ಇಲ್ಲಿರುವ ಒಂದೇ ಒಂದು ಆಳವಾದ ಬಾವಿಯಲ್ಲಿ ಈಗ ಬರೀ ಕಪ್ಪು ನೀರು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಇಲ್ಲಿಯ ಜನರಿಗೆ ಕುಡಿಯುವ ನೀರನ್ನು ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಉ) ಸದರಿ ಗ್ರಾಮದಲ್ಲಿ ಕೊಳವೆ ಬಾವಿಗಳನ್ನು ಹಾಕಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಊ) ಈ ಗ್ರಾಮಕ್ಕೆ ಮಂಜೂರಾತಿಯಾಗಿದ್ದ ಮಿನಿ ನೀರಿನ ಟ್ಯಾಂಕ್ ನಿರ್ಮಾಣ ಮಾಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ಸಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಸಚಿವರು).—

ಅ) ಈ ಗ್ರಾಮದಲ್ಲಿ ಜಲಕ್ಷಾಮ ಉಂಟಾಗಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕಪ್ಪು ನೀರು ಬರುತ್ತಿಲ್ಲ.

ಈ) ಈ ಹಳ್ಳಿಯಲ್ಲಿ ಕೈಪಂಪು ಅಳವಡಿಸಿದ ಎರಡು ಕೊಳವೆ ಬಾವಿಗಳಿದ್ದು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದು ಜನರಿಗೆ ನೀರು ಸರಬರಾಜು ಆಗುತ್ತಿದೆ.

ಉ) ''ಈ'' ಉತ್ತರ ''ಉ'' ಗೂ ಸಮಂಜಸ.

ಊ) ಪ್ರಸ್ತುತವಾಗಿ ಆ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಜಿ. ರಾಮದಾಸ್.—ಕಪ್ಪಗೆರೆ ಗ್ರಾಮದಲ್ಲಿ ಸುಮಾರು ೨೦೦ ಮನೆಗಳಿವೆ. ಅಲ್ಲಿ ಹರಿಜನ ಗಿರಿಜನರು ವಾಸ ಮಾಡುತ್ತಿದ್ದಾರೆ. ಅಲ್ಲಿ ಜಲಕ್ಷಾಮ ಇದೆ. ಬೋರ್‌ವೆಲ್ ಹಾಕಿಸಿದರೆ ನೀರು ಬರುವುದಿಲ್ಲ. ಆದುದರಿಂದ ಅಲ್ಲಿ ನೀರಿನ ಟ್ಯಾಂಕ್‌ನ್ನು ಕಟ್ಟಿಸಿಕೊಡಬೇಕೆಂದು ಮನವಿ ಮಾಡಿ ಕೊಳ್ಳುತ್ತೇನೆ.

(ಉತ್ತರವಿಲ್ಲ)

ಪ್ರಶ್ನೆ ೨೨೭ (೧೦೫) ಶ್ರೀ ಗೋಪಾಲ ಮುಕುಂದ ಕಾಸಡೆ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ ೨೨೮ (೩೭೮) ಶ್ರೀ ಕೆ. ಬಿ. ಶಾಣಪ್ಪ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಶಿಕ್ಷಣ ಇಲಾಖೆಯಲ್ಲಿ ಜವಾನರು ಹಾಗೂ ಅಟೆಂಡರುಗಳ ಹುದ್ದೆಗಳನ್ನು ತುಂಬುವುದು

೨೨೯ (೫೩೧) ಶ್ರೀ ವೀರಯ್ಯಸ್ವಾಮಿ (ಚಿಂಚೋಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಶಿಕ್ಷಣ ಇಲಾಖೆಯಲ್ಲಿ ಸೇವಕ ಮತ್ತು ಅಟೆಂಡರ್ ಹುದ್ದೆಗಳು ಖಾಲಿಯಾದಂತೆಲ್ಲಾ ಭರ್ತಿ ಮಾಡುತ್ತಿರುವುದು ನಿಜವೆ ?

ಆ) ಎಷ್ಟು ಸರ್ಕಾರಿ ಕಾಲೇಜುಗಳು, ಪ್ರೌಢಶಾಲೆಗಳು ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸೇವಕ ಹುದ್ದೆಗಳನ್ನು ಕೊಡಲಾಗಿದೆ ?

ಇ) ಈಗ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಏನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) (೧) ಸರ್ಕಾರಿ ಕಿರಿಯ ಕಾಲೇಜು : ೧,೨೨೭

(೨) ಪ್ರೌಢಶಾಲೆಗಳು : ೨,೧೯೨

(೩) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು : ಇಲ್ಲ

ಇ) (೧) ಕಿರಿಯ ಕಾಲೇಜು : ೩೬೨

(೨) ಪ್ರೌಢಶಾಲೆಗಳು : ೪೨

(೩) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು : ಉದ್ಭವಿಸುವುದಿಲ್ಲ

ಈ) ಈಗ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿಲ್ಲ. ಆದಾಗ್ಯೂ ಆರ್ಥಿಕ ಮಿತವ್ಯಯ ಸಡಿಲಗೊಳಿಸಿ ಖಾಲಿ ಹುದ್ದೆ ಭರ್ತಿ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.